# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 50(425)

ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 16-02-2023.

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ವಿವಿಧ ಯೋಜನೆಗಳಿಗೆ ನಿಗಧಿಪಡಿಸಿರುವ ಗುರಿಯೆಷ್ಟು; ಇದನ್ನು ಹೆಚ್ಚಿಗೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಶಾದಿಮಹಲ್‌ಗಳನ್ನು ನಿರ್ಮಿಸಲಾಗಿದೆ. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 2022-23 ನೇ ಸಾಲಿನ ಆಯವ್ಯಯದಲ್ಲಿ ರೂ.60.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಅದರಲ್ಲಿ ಈ ಕೆಳಕಂಡಂತೆ ಭೌತಿಕ ಗುರಿಗಳನ್ನು ನಿಗದಿಪಡಿಸಲಾಗಿದೆ.<br><br>ಕ್ರ.ಸಂ. / ಯೋಜನೆ / ಭೌತಿಕ ಗುರಿ<br>1 / ಶ್ರಮಶಕ್ತಿ ಯೋಜನೆ / 1000<br>2 / ಟ್ಯಾಕ್ಸಿ/ಗೂಡ್ಸ್/ಪ್ಯಾಸೆಂಜರ್ ಆಟೋ ವಾಹನ ಸಹಾಯಧನ ಯೋಜನೆ. / 1067<br>3 / ಸ್ವಯಂ ಉದ್ಯೋಗ ಯೋಜನೆ. / 1000<br>4 / ಅರಿವು ಯೋಜನೆ / 3500<br><br>ನಿಗಮಕ್ಕೆ ಸರ್ಕಾರದ ಆದೇಶ ಸಂಖ್ಯೆ: MWD 65 MDC 2022 ದಿನಾಂಕ:26.08.2022 ರ ಪ್ರಕಾರ ಹೆಚ್ಚುವರಿಯಾಗಿ ರೂ.50.00 ಕೋಟಿ ಅನುದಾನ ಮಂಜೂರಾಗಿದ್ದು ಅದರಲ್ಲಿ<br>1.)ಗಂಗಾ ಕಲ್ಯಾಣ ಯೋಜನೆಗೆ 449 ಭೌತಿಕ ಗುರಿ ನಿಗದಿಪಡಿಸಲಾಗಿದ್ದು ಮತ್ತು<br>2.)ಅರಿವು ಯೋಜನೆಯ ಭೌತಿಕ ಗುರಿಯನ್ನು 3500 ರಿಂದ 8775 ಕ್ಕೆ ಹೆಚ್ಚಿಸಲಾಗಿದೆ.<br><br>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಒಟ್ಟು 57 ಶಾದಿಮಹಲ್ ನಿರ್ಮಿಸಲು ಅನುಮೋದನೆಯನ್ನು ನೀಡಲಾಗಿದೆ. |
| ಆ. | ಕಳೆದ ಮೂರು ವರ್ಷಗಳಿಂದ ಶಾದಿಮಹಲ್‌ಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಎಷ್ಟು ಶಾದಿಮಹಲ್‌ಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. | ಕಳೆದ ಮೂರು ವರ್ಷಗಳಲ್ಲಿ ಅನುಮೋದನೆ ನೀಡಲಾಗಿರುವ 57 ಶಾದಿಮಹಲ್‌ಗಳ ಪೈಕಿ 51 ಶಾದಿಮಹಲ್‌ಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ. |
| ಇ. | ಈ ರೀತಿ ಅನುಮೋದಿತ ಶಾದಿಮಹಲ್‌ಗಳ ಅನುಷ್ಠಾನಕ್ಕೆ ಇನ್ನೂ ಅನುದಾನವನ್ನು ಬಿಡುಗಡೆ ಮಾಡಬೇಕಿರುವ ಪ್ರಕರಣಗಳೆಷ್ಟು; ಯಾವ ಕಾರಣಕ್ಕೆ ಬಿಡುಗಡೆ ಮಾಡಿಲ್ಲ ಹಾಗೂ ಯಾವ ಕಾಲಮಿತಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. | ರಾಜ್ಯದಲ್ಲಿ ಈವರೆಗೆ ಶಾದಿಮಹಲ್ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ನೀಡಿ ಭಾಗಶಃ ಅನುದಾನವನ್ನು ಬಿಡುಗಡೆ ಮಾಡಲು 126 ಪ್ರಕರಣಗಳು ಬಾಕಿ ಇರುತ್ತದೆ. 2020-21 ನೇ ಸಾಲಿನಿಂದ ಶಾದಿಮಹಲ್ ಅನುಷ್ಠಾನಕ್ಕೆ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿರುವುದಿಲ್ಲ. ಆದರೂ ಅಲ್ಪಸಂಖ್ಯಾತರ ಸಮುದಾಯ ಭವನ / |

| | | |
|---|---|---|
| | | ಶಾದಿಮಹಲ್ ಕಟ್ಟಡ ಕಾಮಗಾರಿಯು ಪೂರ್ಣಗೊಳ್ಳದೆ ಬಾಕಿ ಇರುವ 126 ಸಂಸ್ಥೆಗಳಿಗೆ ರೂ.54.14 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: **MWD 16 LMQ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ